# ಪ್ರಾರ್ಥನೆ



**ಮೋದೇರ್ ವಿವೇಕಾನಂದ ತುಮಿ ಗೋ – ವಿಶ್ವ ವಿವೇಕಾನಂದ ।**

**ಸ್ವದೇಶ್ ವಿದೇಶ್ ಉಜಲಿ ಉಠಿಛೇ ತೋಮಾರ್ ನವೀನ ತಂತ್ರ**
**ಆಕಾಶ್ ಬಾತಾಸ್ ಧ್ವನಿಯಾ ತುಲಿಛೇ ತೋಮಾರ್ ಮೋಹನ ಮಂತ್ರ**
**ನಂದಿತ ಧರಾ ಮಂದಿರ ಮಾಝೇ ಧರ್ಮೇರ ಸ್ರಕ್ ಗಂಧ ॥ ೧ ॥**

**ಭೂಧರೇ ಸಾಗರೇ ಗಹನೇ ಕಾನನೇ ಯಾಪಿಲೇ ಕೊತೊನಾ ನಿಶಿ**
**ತುಷಾರ ಹಿಮಾನಿ ಗಿರಿಕಂದರ ಭ್ರಮಿಲೇ ಕೊತೊನಾ ದಿಶಿ**
**ಅಂಕುರ ಪುನಃ ಶಂಕರ ಜ್ಞಾನ ಶಾಕ್ಯೇರ ತ್ಯಾಗಾನಂದ ॥ ೨ ॥**

**ಶಿಕಾಗೊ ಸಂಘೇ ಸಂಗೀತ ತವ ಶೀರ್ಷೇ ಉಠಿಲೊ ಭಾಸಿ**
**ಶುನಿಲೊ ವಿಶ್ವ ಶುನಿಲೊ ನಿಃಸ್ವ ಶುನಿಲೊ ಪ್ರಾಸಾದವಾಸೀ**
**ಸೃಜಿಲೇ ಶ್ರೀಮಠ ಕುಂಜಕುಟೀರ ತೀರ್ಥ ಮುಖಾರವಿಂದ ॥ ೩ ॥**

(ನಮ್ಮ ವಿವೇಕಾನಂದನೆ, ನೀನು ವಿಶ್ವವ್ಯಾಪಿ ವಿವೇಕಾನಂದನಾಗಿರುವೆ!

ಸ್ವದೇಶ, ವಿದೇಶಗಳು ನಿನ್ನ ನವೀನ ವಿಚಾರಗಳಿಂದ ಬೆಳಗುತ್ತಿದೆ. ಆ ನಿನ್ನ ಮನಮೋಹಕವಾದ ಮಂತ್ರಧ್ವನಿಯನ್ನು ಆಕಾಶ, ವಾಯು ಗಳೂ ಕೂಡ ಪ್ರತಿಧ್ವನಿಸಿ ಮೆರೆಯುತ್ತಿವೆ. ಭೂಮಂಡಲವೆಂಬ ಮಂದಿರದಲ್ಲಿ ಧರ್ಮವೆಂಬ ಹೂಮಾಲೆಯ ಸುಗಂಧವು ಆನಂದ ನೀಡುತ್ತಿದೆ ॥ ೧ ॥

ಭೂಶಿರದಲ್ಲಿ, ಸಾಗರದಲ್ಲಿ, ಗಹನವಾದ ಕಾನನದಲ್ಲಿ ಅದೆಷ್ಟು ರಾತ್ರಿಗಳನ್ನು ನೀನು ಕಳೆದಿಲ್ಲ! ಹಿಮಾಚ್ಛಾದಿತವಾದ ಗಿರಿಕಂದರಗಳಲ್ಲಿ ಅದಿಷ್ಟು ದಿನ ನೀನು ಅಲೆದಾಡಿಲ್ಲ! ನಿನ್ನಲ್ಲಿ ಶ್ರೀಶಂಕರರ ಜ್ಞಾನ, ಬುದ್ಧನ ತ್ಯಾಗ–ಆನಂದಗಳು ಮತ್ತೆ ಅಂಕುರಗೊಂಡವು. ॥ ೨ ॥

ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ನಿನ್ನ ಅದ್ಭುತವಾದ ಭಾಷಣವು ಸಂಗೀತದಂತೆ ಆಪ್ಯಾಯಮಾನವಾಗಿ ಬೆಳಗಿ ಉದಯಿಸಿತು. ಇಡೀ ಜಗತ್ತೇ ಅದನ್ನು ಕೇಳಿತು, ಕೇಳಿ ಮೂಕವಿಸ್ಮಿತವಾಯಿತು. ಮನೆ–ಅರಮನೆಗಳಲ್ಲೂ ಅದು ಹರಡಿತು. ಅತ್ಯಂತ ಪವಿತ್ರವಾದ ಮಠವನ್ನು (ರಾಮಕೃಷ್ಣ ಸಂಘವನ್ನು) ಸ್ಥಾಪಿಸಿ,ಸಾಧಕರಿಗೆ ಆಶ್ರಯ ನೀಡಿದೆ. ಈ ತೀರ್ಥಕ್ಷೇತ್ರವನ್ನು ಸೃಷ್ಟಿಸಿದಾಗ ನಿನ್ನ ವದನಾರವಿಂದವು ಆನಂದದಿಂದ ಅರಳಿತು. ॥ ೩ ॥)

*— ಸ್ವಾಮಿ ಅಭೇದಾನಂದ*

## ಸೂಕ್ತಿಪ್ರಭ

## ಚಿಕಾಗೋ ಭಾಷಣದ ಸೂಕ್ತಿಗಳು

ಪರಧರ್ಮ ಸಹಿಷ್ಣುತೆಯಲ್ಲಿ ನಮಗೆ ನಂಬಿಕೆಯಿದೆ; ಅಷ್ಟೇ ಅಲ್ಲ, ಎಲ್ಲ ಧರ್ಮಗಳೂ ಸತ್ಯ ಎಂಬುದನ್ನು ನಾವು ಒಪ್ಪುತ್ತೇವೆ. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ, ಎಲ್ಲ ಧರ್ಮಗಳಲ್ಲಿ ಯಾರು ಯಾರು ಹಿಂಸೆಗೆ ಒಳಗಾದರೋ ಅವರಿಗೆಲ್ಲ ಆಶ್ರಯವನ್ನು ನೀಡಿದ ದೇಶಕ್ಕೆ ಸೇರಿದವನು ನಾನು ಎಂಬ ಹೆಮ್ಮೆ ನನ್ನದು.

ಮುಕ್ತರಾಗಲು, ಪವಿತ್ರಾತ್ಮರಾಗಲು, ದೇವರನ್ನು ಸೇರಲು ಮತ್ತು ದೇವರನ್ನು ನೋಡಲು ಅನವರತ ಹೋರಾಡುವುದೇ ಹಿಂದುಗಳ ಸಿದ್ಧಾಂತದ ಗುರಿ. ಹೀಗೆ ದೇವರನ್ನು ಸೇರುವುದೇ, ದೇವರನ್ನು ನೋಡುವುದೇ, ಪರಂಧಾಮದಲ್ಲಿರುವ ಭಗವಂತನಂತೆ ಪವಿತ್ರಾತ್ಮರಾಗುವುದೇ ಹಿಂದೂಧರ್ಮ.

ಜಗತ್ತಿನಲ್ಲಿ ಎಂದಾದರೂ ಒಂದು ವಿಶ್ವಧರ್ಮ ಎನ್ನುವುದು ಅಸ್ತಿತ್ವಕ್ಕೆ ಬರುವುದಾದರೆ ಅದು ಕಾಲದೇಶಗಳ ಎಲ್ಲೆಯನ್ನು ಮೀರಿರುವಂಥದ್ದಾಗಿರಬೇಕು; ಅದು ತಾನು ಯಾವ ದೇವರನ್ನು ಕುರಿತು ಬೋಧಿಸುತ್ತದೆಯೋ ಆ ದೇವರಷ್ಟೇ ಅನಂತವಾಗಿರಬೇಕು; ಅಷ್ಟೇ ಅಲ್ಲ, ಸಂತರಿಗೆ ಹೇಗೋ ಹಾಗೆ ಪಾಪಿಗಳಿಗೂ ಅದು ದೊರಕುವಂತಿರಬೇಕು. ಅದರ ವ್ಯಾಪ್ತಿಯೆಲ್ಲವೂ, ಅದರ ದಿವ್ಯ ಶಕ್ತಿಯೆಲ್ಲವೂ ಮಾನವತೆ ತನ್ನ ನೈಜ, ದಿವ್ಯ ಸ್ವಭಾವವನ್ನು ಅರಿಯಲು ನೆರವಾಗುವಂತಿರಬೇಕು.

ಬ್ರಾಹ್ಮಣನ ಅದ್ಭುತ ಧೀಶಕ್ತಿ ಮತ್ತು ಆ ಮಹಾ ಆಚಾರ್ಯ ಬುದ್ಧನ ಹೃದಯವೈಶಾಲ್ಯ , ಆತ್ಮೌನ್ನತ್ಯ ಮತ್ತು ಅದ್ಭುತವಾದ ವಿಶ್ವಾನುಕಂಪೆ ಇವುಗಳನ್ನು ಸಂಗಮಗೊಳಿಸೋಣ.

ಪ್ರತಿಯೊಬ್ಬನೂ ಇತರರ ಮನೋಭಾವವನ್ನು ಗ್ರಹಿಸಬೇಕು. ಆದರೆ ತನ್ನ ವೈಯಕ್ತಿಕತೆಯನ್ನು ಉಳಿಸಿಕೊಂಡು ತನ್ನದೇ ಬೆಳವಣಿಗೆಯ ನಿಯಮಗಳಿಗೆ ಅನುಗುಣವಾಗಿ ಬೆಳೆಯಬೇಕು.